ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ

ದಿನಾಂಕ : DATE : 24/03/2019

# ಡಿಕೆಶಿ ಬೇನಾಮಿ ಆಸ್ತಿ ಜಪ್ತಿ

## ₹ 75 ಕೋಟಿ ಮೌಲ್ಯದ ಕಟ್ಟಡ ಮತ್ತು ಜಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆ ಜಟಾಪಟಿಗೆ 'ಅಖಾಡ' ಅಣಿಯಾಗುತ್ತಿರುವುದರ ನಡುವೆಯೇ ರಾಜ್ಯದ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರಿಗೆ ಸೇರಿದ ₹ 75 ಕೋಟಿ ಮೌಲ್ಯದ ಬೇನಾಮಿ ಆಸ್ತಿಯನ್ನು ಆದಾಯ ತೆರಿಗೆ ಇಲಾಖೆ ಜಪ್ತಿ ಮಾಡುವ ಮೂಲಕ ಭಾರಿ ಆಘಾತ ನೀಡಿದೆ.

ಸಚಿವರ ಬೇನಾಮಿ ಆಸ್ತಿ ಜಪ್ತಿ ಮಾಡಿರುವ ವಿಷಯವನ್ನು ಕರ್ನಾಟಕ ಮತ್ತು ಗೋವಾ ವೃತ್ತದ ಆದಾಯ ತೆರಿಗೆ ಇಲಾಖೆ ಮುಖ್ಯ ಕಮಿಷನರ್ ಮತ್ತು ಮಹಾನಿರ್ದೇಶಕ (ತನಿಖೆ) ಬಿ.ಆರ್. ಬಾಲಕೃಷ್ಣನ್ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಯಾವ ಹಂತದಲ್ಲಿಯೂ ಶಿವಕುಮಾರ್ ಅವರ ಹೆಸರನ್ನು ಬಾಲಕೃಷ್ಣನ್ ಪ್ರಸ್ತಾಪಿಸಲಿಲ್ಲ. ಆದರೆ, ಕರ್ನಾಟಕದ ಸಂಪುಟ ದರ್ಜೆ ಸಚಿವರು ಎಂದಷ್ಟೇ ಉಲ್ಲೇಖಿಸಿದರು. ಸಚಿವರ ತಾಯಿ ಹೆಸರಿನಲ್ಲಿರುವ ಕಟ್ಟಡ ಹಾಗೂ ಜಮೀನನ್ನು ಜಪ್ತಿ ಮಾಡಲಾಗಿದೆ. ಈ ಆಸ್ತಿಯ ಮಾರುಕಟ್ಟೆ ಮೌಲ್ಯ ₹ 75 ಕೋಟಿ' ಎಂದು ಸ್ಪಷ್ಟಪಡಿಸಿದರು.

'ಮೂಲ ಬಹಿರಂಗಪಡಿಸದ ಆಸ್ತಿಯನ್ನು ಜಪ್ತಿ ಮಾಡಿಕೊಳ್ಳಲು ಬೇನಾಮಿ ಕಾಯ್ದೆಯಡಿ ಅವಕಾಶವಿದೆ. ಈ ಸಂಬಂಧ ಕಾನೂನು ಪ್ರಕ್ರಿಯೆ ನಡೆಯುವ ಸಂದರ್ಭದಲ್ಲೂ ಹಣದ ಮೂಲವನ್ನು ಹೇಳದಿದ್ದರೆ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿದೆ. ಸಚಿವರು ಎಷ್ಟು ಮೌಲ್ಯದ ಆಸ್ತಿ ಹೊಂದಿದ್ದಾರೆ ಎಂಬುದನ್ನು ಅಂದಾಜಿಸಲಾಗುತ್ತಿದೆ. ಖಂಡಿತಾ, ದೊಡ್ಡ ಪ್ರಮಾಣದಲ್ಲಿ ಬೇನಾಮಿ ಆಸ್ತಿ ಹೊಂದಿದ್ದಾರೆ' ಎಂದು ಬಾಲಕೃಷ್ಣನ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಸಚಿವರು ₹ 450 ಕೋಟಿ ಮೌಲ್ಯದ ಆಸ್ತಿಯನ್ನು ಘೋಷಿಸಿಕೊಂಡಿದ್ದಾರೆ. ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ ಸಮಯದಲ್ಲಿ ₹ 11.86 ಕೋಟಿ ವಶಪಡಿಸಿಕೊಂಡಿದೆ' ಎಂದರು.

'ರಾಜ್ಯದ ಮೂವರು ರಾಜಕಾರಣಿಗಳ ಅಕ್ರಮ ಆಸ್ತಿಗಳೂ ಸೇರಿದಂತೆ ಸುಮಾರು 390 ಕೋಟಿ ಮೌಲ್ಯದ ಬೇನಾಮಿ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. ಒಟ್ಟು 235 ಪ್ರಕರಣಗಳಲ್ಲಿ 200 ಎಕರೆಗೂ ಹೆಚ್ಚು ಜಮೀನು ಇದರಲ್ಲಿ ಸೇರಿದೆ. ಇದರಲ್ಲಿ 92 ಬೇನಾಮಿದಾರರು ಹಾಗೂ 36 ಮಾಲೀಕರನ್ನು ಪತ್ತೆ ಹಚ್ಚಲಾಗಿದೆ. ನಗದು ಪಾವತಿಸಿ ಈ ಆಸ್ತಿಗಳನ್ನು ಖರೀದಿಸಲಾಗಿದೆ' ಎಂದು ಅವರು ಸ್ಪಷ್ಟಪಡಿಸಿದರು.

ಆದಾಯ ತೆರಿಗೆ ಇಲಾಖೆ ನಿರ್ದಿಷ್ಟ ಪಕ್ಷಕ್ಕೆ ಸೇರಿದ ನಾಯಕರ ಮೇಲೆ ಮಾತ್ರ ದಾಳಿ ನಡೆಸುತ್ತಿದೆ ಎಂಬ ಆರೋಪವನ್ನು ಆದಾಯ ತೆರಿಗೆ ಇಲಾಖೆಯ ಮುಖ್ಯ ಕಮಿಷನರ್ ನಿರಾಕರಿಸಿದರು. ಎಲ್ಲ ಪಕ್ಷಗಳಿಗೆ ಸೇರಿದ ಹಲವು ನಾಯಕರ ಮೇಲೆ ದಾಳಿ ನಡೆಸಲಾಗಿದೆ ಎಂದು ಸಮಜಾಯಿಷಿ ನೀಡಿದರು. ಆದರೆ, ಪಕ್ಷಗಳು ಹಾಗೂ ನಾಯಕರ ಹೆಸರುಗಳನ್ನು ಹೇಳಲಿಲ್ಲ.

### 'ಯಡಿಯೂರಪ್ಪನವರ ಡೈರಿ ಫೋರ್ಜರಿ'

'ದಿ ಕ್ಯಾರವಾನ್'ನಲ್ಲಿ ಪ್ರಕಟವಾಗಿರುವ ವರದಿಯಲ್ಲಿರುವ ಡೈರಿಯ ಪುಟಗಳು ಫೋರ್ಜರಿ. ಕೇಂದ್ರೀಯ ನೇರ ತೆರಿಗೆ ಮಂಡಳಿ ಈಗಾಗಲೇ ಸ್ಪಷ್ಟಪಡಿಸಿದೆ ಎಂದು ಬಾಲಕೃಷ್ಣನ್ ಹೇಳಿದರು.

'ಆದಾಯ ತೆರಿಗೆ ಇಲಾಖೆ ಕೈಗೆತ್ತಿಕೊಂಡಿರುವ ತನಿಖೆಯೊಂದರ ಮೇಲೆ ಪ್ರಭಾವ ಬೀರುವ ಉದ್ದೇಶದಿಂದ ಇವುಗಳನ್ನು ಬಿಡುಗಡೆ ಮಾಡಲಾಗಿದೆ. ಈ ಬಗ್ಗೆ ಸಂಬಂಧಪಟ್ಟವರನ್ನು ಪ್ರಶ್ನಿಸಲಾಗಿದೆ ಎಂದೂ ಅವರು ವಿವರಿಸಿದರು.

'ಈ ಹಾಳೆಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೂ ಕಳುಹಿಸಿ ಪರೀಕ್ಷೆ ಮಾಡಿಸಲಾಗಿದೆ. ಇದು ಮೂಲ ಡೈರಿಯದ್ದಲ್ಲ' ಎಂದು ವರದಿ ತಿಳಿಸಿದೆ ಎಂದೂ ಬಾಲಕೃಷ್ಣನ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

2